## ನಿಮ್ಮೊಡನೆ

# ಮರುಹೊಂದಾಣಿಕೆಯ ಬದುಕಿನತ್ತ?

ಯುಗಾದಿ ಹಬ್ಬವನ್ನು ಮೊನ್ನೆಯಷ್ಟೇ ಆಚರಿಸಿದ್ದೇವೆ. ಶಾರ್ವರಿ ನಾಮ ಸಂವತ್ಸರವು ಇನ್ನಷ್ಟು ಸುಖ, ಸಮೃದ್ಧಿ ತರಲಿ ಎಂದು ಶುಭಾಶಯಗಳನ್ನು ವಿನಿಮಯ ಮಾಡಿಕೊಂಡಿದ್ದೇವೆ. ಬೇವು–ಬೆಲ್ಲ ಹಂಚಿದರೂ ಒಳಮನಸ್ಸು ಬಯಸುವುದು ಸಿಹಿಯನ್ನೇ ಅಲ್ಲವೇ? ಆದರೆ, ಮನುಷ್ಯನ ಈ ಸಹಜ ಬಯಕೆಗೆ ವಿರುದ್ಧ ದಿಕ್ಕಿನಲ್ಲಿ ಕಹಿಗಾಳಿ ಬೀಸತೊಡಗಿದೆ. ಇದರ ಪರಿಣಾಮವು ಯಾವುದೋ ಒಂದು ವಟಾರ, ಗಲ್ಲಿ, ಊರು, ನಗರಕ್ಕೆ ಸೀಮಿತ ಆಗಿರುವಂತೆ ತೋರುತ್ತಿಲ್ಲ. ಜಗತ್ತಿನ ಉದ್ದಗಲಕ್ಕೂ ಚಾಚಿ, ಸಮಸ್ತರನ್ನೂ ಬಾಧಿಸುವಂತಿದೆ!

ಇದಕ್ಕೆ ಕಾರಣವಾಗಿರುವ ಸೂಕ್ಷ್ಮಾಣು ಜೀವಿಯ ಹೆಸರು ಜನಜನಿತವಾಗಿರುವುದರಿಂದ ಇಲ್ಲಿ ಉಲ್ಲೇಖಿಸಬೇಕಾದ ಅಗತ್ಯ ಇಲ್ಲ. ಆದರೆ, ಅದು ಎಚ್ಚರಿಕೆಯ ಕರೆಗಂಟೆ ಬಾರಿಸುತ್ತಿದೆ. ನಮ್ಮ ಬದುಕಿನ ಬಂಡಿ ಹಳಿ ತಪ್ಪಬಾರದು ಎನ್ನುವುದಾದರೆ, ಆ ಕರೆಗಂಟೆಯ ಸದ್ದಿಗೆ ಕಿವಿಗೊಡಲೇಬೇಕು. ನಮ್ಮ ಬದುಕಿನ ಆದ್ಯತೆಗಳನ್ನು, ಅಗತ್ಯಗಳನ್ನು ಮರುಹೊಂದಾಣಿಕೆ ಮಾಡಿಕೊಳ್ಳುವ ಅಗತ್ಯದ ಕುರಿತು ಅದು ಎಚ್ಚರಿಸುತ್ತದೆ. ಒಳಗಣ್ಣು ತೆರೆದು ನೋಡಿದರೆ ಅದರ ಅಗತ್ಯ ಎಲ್ಲರಿಗೂ ಕಾಣಿಸಿಗಬಹುದು.

ವೈರಾಣು ಸೃಷ್ಟಿಸಿರುವ ಈ ಬಿಕ್ಕಟ್ಟು ವಾರದಲ್ಲೋ ತಿಂಗಳಲ್ಲೋ ನಿವಾರಣೆ ಆಗಬಹುದು. ಮಳೆ ನಿಂತರೂ ಮರದ ಹನಿ ನಿಲ್ಲದು ಎಂಬಂತೆ, ವೈರಾಣು ಉಂಟುಮಾಡಿರುವ ಪರಿಣಾಮಗಳು ಬಹಳ ಕಾಲ ಕಾಡಬಹುದು. ಅದರ ಬಿಸಿ ಒಬ್ಬೊಬ್ಬರಿಗೆ ಒಂದೊಂದು ರೀತಿ ತಟ್ಟಬಹುದು. ನಿವಾರಣೋತ್ತರ ಕಾಲಘಟ್ಟದಲ್ಲಿ ವಿಶ್ವ ಮೊದಲಿನ ಥರ ಇರುವುದಿಲ್ಲ ಎಂಬ ಮಾತಿನಲ್ಲಿ ತಥ್ಯ ಇಲ್ಲದೇ ಇಲ್ಲ. ಆ ವಿಶ್ವದಲ್ಲಿ ನಮ್ಮ ದೇಶವೂ ಒಳಗೊಂಡಿದೆ. ಕರುನಾಡಿನ ನಾವೂ ಒಳಗೊಂಡಿರುತ್ತೇವೆ. ಅಂದಮೇಲೆ ನಮ್ಮ ಮನೆ ವ್ಯವಹಾರಗಳು ಕೂಡ ಮೊದಲಿನಂತೆಯೇ ಉಳಿಯಲು ಆಗದಿರಬಹುದು. ವ್ಯವಹಾರ ಎಂಬ ಪದದಲ್ಲಿ ಆದಾಯ–ವೆಚ್ಚ ಮಾತ್ರ ಸೇರಿರುವುದಿಲ್ಲ. ನಾವು ಉಣ್ಣುವ ಊಟ–ತಿಂಡಿ, ಧರಿಸುವ ಬಟ್ಟೆಬರೆ, ಬಳಸುವ ವಾಹನ ಎಲ್ಲವೂ ಒಳಗೊಳ್ಳುತ್ತವೆ. ಅಷ್ಟೇ ಏಕೆ, ಇಡೀ ಜೀವನಶೈಲಿ, ಕನಸು, ಭವಿಷ್ಯದ ಯೋಜನೆಗಳಲ್ಲಿ ಸಣ್ಣಮಟ್ಟಿಗಾದರೂ ಪಲ್ಲಟಗಳು ಆಗುವ ಸಾಧ್ಯತೆ ಇಲ್ಲದಿಲ್ಲ.

ಜಾಗತಿಕ ಆರ್ಥಿಕತೆಯು ಹಿಂಜರಿತಕ್ಕೆ ಕಾಲಿಟ್ಟಿದೆ ಎಂದು ತಜ್ಞರು ಹೇಳಿದ್ದಾರೆ. ಆರ್ಥಿಕ ಬೆಳವಣಿಗೆ ದರದಲ್ಲಿ ತೀವ್ರ ಕುಸಿತ ಉಂಟಾಗುವುದು ಶತಃಸಿದ್ಧ. ಅಂದಮೇಲೆ ಉದ್ಯೋಗನಷ್ಟ, ಸಂಬಳ ಕಡಿತದ ಜತೆಗೆ ಹೊಸ ಉದ್ಯೋಗಗಳ ಸೃಷ್ಟಿ ಕೆಲವು ದಿನಗಳ ಮಟ್ಟಿಗಾದರೂ ಇಲ್ಲದೇ ಇರುವಂತಹ ಸ್ಥಿತಿ ಎದುರಾಗಬಹುದು. ಗ್ರಾಹಕ ವಸ್ತುಗಳಿಗೆ ಬೇಡಿಕೆ ಕುಸಿಯಬಹುದು. ಕಾರು, ಬೈಕುಗಳ ಮಾರಾಟಕ್ಕೆ ಹಿನ್ನಡೆ ಆಗಬಹುದು. ವಿದೇಶ ಪ್ರವಾಸ, ವಿದೇಶದಲ್ಲಿ ಓದು… ಇಂತಹ ಕನಸುಗಳೂ ನನಸಾಗದಿರಬಹುದು. ಇದೊಂದು ರೀತಿ ಚಕ್ರಸುಳಿ. ಆ ಸುಳಿಯೊಳಗೆ ನಾವೂ ಸಿಲುಕುತ್ತೇವೆ. ಬೇರೆ ಬೇರೆಯವರಿಗೆ ಬೇರೆ ಬೇರೆ ರೀತಿ ಬಿಸಿ ತಟ್ಟಬಹುದು. ಉದ್ಯಮಿಯಾದವನಿಗೆ ಒಂದು ಬಗೆಯ ತೊಳಲಾಟ. ಉದ್ಯೋಗಸ್ಥನಿಗೆ ಇನ್ನೊಂದು ರೀತಿಯ ಸಂಕಟ. ಕಾರ್ಮಿಕನಿಗೆ–ಕೂಲಿಕಾರನಿಗೆ ಇನ್ನೇನೋ ಚಿಂತೆ. ರೈತರ ಬವಣೆ ಮತ್ತೊಂದು ಬಗೆಯದು. ಸರ್ಕಾರಗಳಿಗೂ ಚಿಂತೆ ತಪ್ಪಿದ್ದಲ್ಲ.

ಇಂತಹ ಕಷ್ಟ ನಿರೀಕ್ಷೆಯ ಸಂದರ್ಭದಲ್ಲಿ ಮೊದಲು ಎಚ್ಚೆತ್ತುಕೊಳ್ಳಬೇಕಾದುದು ಮನೆಯೊಡತಿ. ಖರ್ಚಿನ ವಿಚಾರದಲ್ಲಿ ಕೈಬಿಗಿ ಹಿಡಿಯುವಂತೆ ಮನೆಮಂದಿಯ ಕಿವಿ ಹಿಂಡಬೇಕಾದ ಗುರುತರ ಜವಾಬ್ದಾರಿ ಅವರ ಮೇಲಿದೆ. ಐವತ್ತಾರು ಬಗೆಯ ಕಾರ್ಡ್‌ಗಳನ್ನು ಕಿಸೆಯಲ್ಲಿ ಇರಿಸಿಕೊಂಡು, ಬೇಕೋ ಬೇಡವೋ ಎಂಬ ವಿವೇಚನೆ ಬಳಸದೆ ಖರೀದಿಸಿ ತಂದು ಸುರಿವ ಪರಿಪಾಟಕ್ಕೆ ತಡೆಯೊಡ್ಡುವ ಕೆಲಸವನ್ನು ಅಮ್ಮಂದಿರು ಶುರು ಹಚ್ಚಬಹುದು. ಸದ್ಯದ ಮಟ್ಟಿಗೆ ಅದು ಅಪೇಕ್ಷಣೀಯವೂ ಹೌದು. ಬಹುರಾಷ್ಟ್ರೀಯ ಚಿಲ್ಲರೆ ಮಳಿಗೆಗಳಲ್ಲಿ ದರಪಟ್ಟಿ ನೋಡದೆ ದಿನಸಿ–ವಸ್ತುಗಳನ್ನು ಖರೀದಿಸಿ ತರುವ ಚಾಳಿಗೆ ಲಗಾಮು ಬೀಳಬಹುದು. ಮನೆ ಬಳಿ ಇರುವ ತರಕಾರಿ ಅಂಗಡಿಯಲ್ಲಿ ಚೌಕಾಸಿ ಮಾಡಿ ಖರೀದಿಸುವ, ಕೊಸರು ಕೇಳಿ ಪಡೆಯುವ ಆ ಹಳೆಯ ಸುಖದ ಕ್ಷಣಗಳು ಮರುಕಳಿಸಬಹುದು. ಅದರಲ್ಲೂ ಒಂದು ಖುಷಿ ಇದೆ ಎಂಬುದು ಬೇರೆ ಮಾತು!

ತರುಣ ಪೀಳಿಗೆಗೆ ಕಾಲ್ನಡಿಗೆಯ ರೂಢಿಯೇ ತಪ್ಪಿದೆ. ತರಕಾರಿ ತರುವುದಕ್ಕೂ ವಾಹನ ಬೇಕು. ತಾವು ತೊಡುವ ಬಟ್ಟೆಯನ್ನು ಇಸ್ತ್ರಿ ಮಾಡಿಕೊಳ್ಳುವ ಕೌಶಲ ಕೂಡ ಕರಗತ ಆಗಿಲ್ಲ ಕೆಲವರಿಗೆ. ನಾಮಕರಣ, ಹುಟ್ಟುಹಬ್ಬ, ಮದುವೆ, ಹೊಸವರ್ಷ ಆಚರಣೆ… ಎಲ್ಲದರಲ್ಲೂ ಶ್ರೀಮಂತಿಕೆಯ ಪ್ರದರ್ಶನ. ಇಂತಹ ಆಡಂಬರ, ದುಬಾರಿ ಖರ್ಚುಗಳು ತೊಡಿಸುವ ಕಿರೀಟದ ಕುರಿತು ಆತ್ಮಾವಲೋಕನಕ್ಕೆ ಇದು ಸಕಾಲ. ಕುಟುಂಬದ ಸದಸ್ಯರೆಲ್ಲರೂ ಮನೆಯೊಳಗೇ ಸೇರಿಕೊಂಡಿರುವ ಈ ಸಂದರ್ಭವು ಆದ್ಯತೆಗಳು, ಅಗತ್ಯಗಳ ಮರುಹೊಂದಾಣಿಕೆ ಬಗ್ಗೆ ಯೋಚಿಸಲು ಪ್ರೇರೇಪಿಸಬೇಕಾಗಿರುವುದು ಇಂದಿನ ಅಗತ್ಯ.

**■ ಎನ್. ಉದಯಕುಮಾರ್**

> ಆರ್ಥಿಕ ಬೆಳವಣಿಗೆ ದರದಲ್ಲಿ ತೀವ್ರ ಕುಸಿತ ಉಂಟಾಗಿರುವ ಪರಿಣಾಮ ಉದ್ಯೋಗನಷ್ಟ, ಸಂಬಳ ಕಡಿತದ ಜತೆಗೆ ಹೊಸ ಉದ್ಯೋಗಗಳ ಸೃಷ್ಟಿ ಕೆಲವು ದಿನಗಳ ಮಟ್ಟಿಗೆ ಇಲ್ಲದಂತಾಗುತ್ತದೆ. ಗ್ರಾಹಕ ವಸ್ತುಗಳಿಗೆ ಬೇಡಿಕೆ ಕುಸಿಯಬಹುದು. ಕಾರು, ಬೈಕುಗಳ ಮಾರಾಟಕ್ಕೆ ಹಿನ್ನಡೆ ಆಗಬಹುದು. ವಿದೇಶ ಪ್ರವಾಸ, ಆಸ್ತಿ, ಪಾಸ್ತಿಯ ಕನಸು ಸದ್ಯಕ್ಕೆ ಕಟ್ಟಿಡಬೇಕಾಗಿದೆ.

